**AKSHARASURYA**
Peer-Reviewed, Multi Lingual E-Journal
Volume – 02, Issue – 01, January 2023.

# ನಿಜಶರಣ ಅಂಬಿಗರ ಚೌಡಯ್ಯ

**ಡಾ. ಪಿ. ನಾಗರಾಜ**
ಸಹಾಯಕ ಪ್ರಾಧ್ಯಾಪಕರು
ಶಾಸ್ತ್ರೀಯ ಕನ್ನಡ ಭಾಷಾ ಅಧ್ಯಯನ ಸಂಸ್ಥೆ,
ರಾಣಿ ಚನ್ನಮ್ಮ ವಿಶ್ವವಿದ್ಯಾಲಯ ಬೆಳಗಾವಿ.
nagarajapranathi@gmail.com

ಹನ್ನೆರಡನೇ ಶತಮಾನದ ಶರಣರಲ್ಲಿ ಅತ್ಯಂತ ವಿಶಿಷ್ಟವಾದ ವಚನಕಾರ. ವೃತ್ತಿಯಿಂದ ಅಂಬಿಗ, ಪ್ರವೃತ್ತಿಯಲ್ಲಿ ಅನುಭಾವಿ. ಬಸವಣ್ಣನವರ ಅನುಭವ ಮಂಟಪದಲ್ಲಿ ಸಮಾನ ಭೂಮಿಕೆಯ ಸಮ್ಮೇಳನದಲ್ಲಿ ಸೇರಿಕೊಂಡವ. ತನ್ನ ಕಾಯಕ ಅಥವಾ ವ್ಯಕ್ತಿನಾಮದ ಅಂಬಿಗರ ಚೌಡಯ್ಯ ಎಂಬುದೇ ಈತನ ವಚನಗಳ ಅಂಕಿತವಾಗಿದೆ. ಇವನು ಕೇವಲ ತುಂಬಿದ ಹೊಳೆಯಲ್ಲಿ ದೋಣಿಗೆ ಹುಟ್ಟು ಹಾಕುವ ಅಂಬಿಗ ಮಾತ್ರವಲ್ಲ, ಭವಸಾಗರದಲ್ಲೂ ಹುಟ್ಟು ಹಾಕುವ ಕೌಶಲ್ಯ ಉಳ್ಳವ ಎಂದು ಹೇಳಿಕೊಳ್ಳುವುದರಲ್ಲಿ ಅವನ ಅನುಭವದೃಷ್ಟಿ ಪ್ರಕಟವಾಗಿದೆ. ಮಲಪ್ರಭಾ ನದಿಯಲ್ಲಿ ಹರಿಗೋಲಿನಲ್ಲಿ ಜನರನ್ನು ದಾಟಿಸುವ ಕಾಯಕಯೋಗಿ ಯಾದ ಚೌಡಯ್ಯನವರು ಬಸವಣ್ಣನವರಿಗೆ ಆಪ್ತರಾಗಿದ್ದರು. ಬಸವಣ್ಣನವರು ಕಲ್ಯಾಣಕ್ಕೆ ಬರುವ ಪೂರ್ವದಲ್ಲೇ ಮಂಗಳವೇಡಿಯಲ್ಲಿ ಅಂಬಿಗರ ಚೌಡಯ್ಯನ ಸಂಪರ್ಕವಿದ್ದಿತೆಂದು ತಿಳಿದು ಬರುತ್ತದೆ. ಕೆಲವು ವಿದ್ವಾಂಸರ ಪ್ರಕಾರ ಬಹುಶಃ ಕೂಡಲಸಂಗಮದ ಭೀಮಾ ನದಿ ಮತ್ತು ಮಲಪ್ರಭಾ ನದಿಯಲ್ಲಿ ನಾವೆಯನ್ನು ನಡೆಸುತ್ತಿದ್ದಿರಬಹುದು.

ಇವರು ಧಾರವಾಡ ಜಿಲ್ಲೆಯ ರಾಣಿಬೆನ್ನೂರು ತಾಲೂಕು ಚೌಡದಾನಪುರದಲ್ಲಿ ಜನ್ಮ ತಾಳಿದವರು. ತುಂಗಭದ್ರಾ ನದಿಯ ದಂಡೆಯಲ್ಲಿ ಮುಕ್ತಿನಾಥ ದೇವಾಲಯವಿದ್ದು, ಅಲ್ಲಿಯ ಗುರುಶರಣರ ಸಂಪರ್ಕದಿಂದ ಕಲ್ಯಾಣ ನಗರಕ್ಕೆ ಬಂದು ನೆಲೆಸಿದ್ದರು. ಆ ಕಾಲದಲ್ಲಿ ಅಂಬಿಗರೆಂದರೆ ಕೀಳು ಜಾತಿಯವರೆಂದು ಅಸ್ಪೃಶ್ಯತೆಯಿಂದ ಕಾಣುತ್ತಿದ್ದರು. ಅದಕ್ಕೆ ಚೌಡಯ್ಯನ ಉತ್ತರ 'ಅಂಬಿ ಅಂಬಿಗ ಎಂದು ಕುಂದು ನುಡಿಯದಿರಿ, ನಂಬಿದವರಿಗೆ ಒಂದೇ ಹುಟ್ಟಿನಲ್ಲಿ ದಡ ಸೇರಿಸುವವನೇ ಅಂಬಿಗನು' ಎಂದು ನೇರ ಉತ್ತರ ಕೊಡುತ್ತಿದ್ದರು. ಇದರರ್ಥ–ಭಕ್ತಿಪಥದಲ್ಲಿ ಬಂದವರಿಗೆ ಮುಕ್ತಿಪಥವನ್ನು ತೋರಿಸುವೆನೆಂದು ಹೇಳುತ್ತಿದ್ದರು. ಇವರ 130 ವಚನಗಳು ವಚನ ಸಂಪುಟದಲ್ಲಿ ಪ್ರಕಟವಾಗಿವೆ. ಉಳಿದ ವಚನಕಾರರ ವಚನಗಳಲ್ಲಿರುವಂತೆ ಇವನಲ್ಲಿಯೂ ಶಿವಾನುಭವ ಪರವಾದ ವಚನಗಳಿದ್ದರೂ ಅವುಗಳಲ್ಲಿ ಕಂಡುಬರುವ ಸಮಕಾಲೀನ ಸಮಾಜ ವಿಡಂಬನೆಯ ವ್ಯಗ್ರದೃಷ್ಟಿಯು ಬೇರೆಯವರಲ್ಲಿ ವಿರಳವೆಂದೇ ಹೇಳಬೇಕು.

ಅವನ ವಚನಗಳ ವಸ್ತು, ಭಾಷೆ, ಶೈಲಿ ಗಮನಿಸಿದರೆ ಅವನೊಬ್ಬ ಕೆಚ್ಚೆದೆಯ, ನಿಷ್ಠುರ ಪ್ರಕೃತಿಯ, ಗ್ರಾಮ್ಯ ಮನೋಧರ್ಮದ ಒರಟು ವಚನಕಾರ ಎಂಬುದು ಸ್ಪಷ್ಟವಾಗುತ್ತದೆ. ಇವನು ನ್ಯಾಯನಿಷ್ಠುರ, ದಯಾದಾಕ್ಷಿಣ್ಯ ಪರನಲ್ಲ. ಯಾರನ್ನೇ ಆಗಲಿ ಯಾವುದನ್ನೇ ಆಗಲಿ ಅವನು ಟೀಕಿಸದೆ ಬಿಡುವುದಿಲ್ಲ. ಅವನು ಮೃದುವಾಗಿ ಮಾತನಾಡುವುದು ಅಪೂರ್ವ; ಮಾತಿನ ಬಹುಭಾಗ ಹರಿತವಾದದ್ದು, ಸಂಸ್ಕಾರ ದೂರವಾದದ್ದು, 'ಕೇಳಿರಯ್ಯಾ ಮಾನವರೇ' ಶೀಲದಲ್ಲಿ ಸಂಪನ್ನರಾದವರು ನೀವು ಕೇಳಿರೋ', ನನಗೊಬ್ಬರೆಂಜಲು ಸೇರದೆಂದು ಶುಚಿತನದಲ್ಲಿ ಬದುಕುವ ಬರಿಯ ಮಾತಿನ ಭುಂಜಕರು ನೀವು ಕೇಳಿರೋ', 'ಪರಪುರುಷಾರ್ಥವನರಿಯದೆ ಕೆಟ್ಟ ನರಕುರಿಗಳು ನೀವು ಕೇಳಿರೋ' ಎಂದು ಆರಂಭವಾಗಿ ಮೆಟ್ಟಿದ್ದ ದೊಡ್ಡ ಪಾದರಕ್ಷೆಯ ತಕ್ಕೊಂಡು ಲಟಲಟನೆ ಹೊಡೆಯೆಂದ; 'ಪಡಿಹಾರ ಉತ್ತಣ್ಣನ ಎಡ ಪಾದರಕ್ಷೆಯಿಂದ ಪಟಪಟನೆ ಹೊಡೆಯೆಂದ; 'ಮೂಗ ಕೊಯ್ದು ಇಟ್ಟಂಗಿಯ ಕಲ್ಲಿಲೆ ಸಾಸಿವೆಯ ತಿಕ್ಕಿ ಹಿಟ್ಟಿನ ತಳಿದು ಮೇಲೆ ನಿಂಬೆಯ ಹುಳಿಯನೆ ಹಿಂಡಿ ಪಡುವಲ ಗಾಳಿಗೆ ಹಿಡಿ'– ಹೀಗೆ ಮುಕ್ತಾಯವಾಗುತ್ತದೆ ಇವನ ವಚನಗಳ ಶೈಲಿ.

ಇಂದಿನ ವಿಷಮತೆಯ ಕಲುಷಿತ ಸಮಾಜಕ್ಕೆ ಶರಣರ ಸಂದೇಶಗಳು ತಾರಕ ಮಂತ್ರಗಳಾಗಿವೆ. ಮಾನವ ಸುಖ–ಶಾಂತಿ ಸಮಾಧಾನಗಳನ್ನು ಹೊಂದಬೇಕಾದರೆ ಅಂಬಿಗರ ಚೌಡಯ್ಯನವರ ವಚನಗಳನ್ನು ಸಂದರ್ಶಿಸಬೇಕು.

ಚೌಡಯ್ಯನವರು ಅಜ್ಞಾನಿ ಗುರುಶಿಷ್ಯರಿಂದ ಯಾವ ಪ್ರಯೋಜನವೂ ಇಲ್ಲವೆಂಬುದನ್ನು ಮಾರ್ಮಿಕವಾಗಿ ಹೇಳಿದ್ದಾರೆ. ಅನುಭಾವಿಗಳು, ಜ್ಞಾನಿಗಳು ಮತ್ತು ಮಹಾತಪಸ್ವಿಗಳಾದ ಗುರುವಿನಿಂದ ಮಾತ್ರ ಶಿಷ್ಯನ ಉದ್ಧಾರವಾಗುತ್ತದೆ.

ಅರಿಯದ ಗುರು ಅರಿಯದ ಶಿಷ್ಯ
ಇವರಿಬ್ಬರಿಗೇನಪ್ಪುದೋ?
ಕುರುಡ ಕುರುಡನ ಕೈಯ ಹಿಡಿದು
ಪಥವ ನಡೆಯಬಹುದೆ?
ತೊರೆಯಲದ್ದಿ ಹೋಹನ
ಈಜಲರಿಯದವನ
ತೆಗೆದಂತಾಯಿತೆಂದ ನಂಬಿಗರ ಚೌಡಯ್ಯ

ಎರಡು ಗ್ರಾಮದ ನಡುವೆ ಕಟ್ಟಿದ ಸೀಮೆಯ ಕಲ್ಲು
ಅದಿಯನರಿಯದ ಗುರು, ಭೇದಿಸಲರಿಯದ ಶಿಷ್ಯ
ಆದಕಟ್ಟಿದಾತಗುರುವಲ್ಲ, ಕಟ್ಟಿಸಿಕೊಂಡಾತ ಶಿಷ್ಯನಲ್ಲ
ಇವರಿಬ್ಬರೂ ಭ್ರಷ್ಟರೆಂದಾತಅಂಬಿಗರಚೌಡಯ್ಯ

ಪೂಜೆ ಪುನಸ್ಕಾರಗಳ ವಿಷಯವಾಗಿ ಚೌಡಯ್ಯನವರು ಹೀಗೆ ಹೇಳಿದ್ದಾರೆ

ಅರ್ಚನೆಯ ಮಾಡುವಲ್ಲಿ ಆದೇಶ ಅರಿತಿರಬೇಕು
ಪೂಜೆಯ ಮಾಡುವಲ್ಲಿ ಪುಣ್ಯ ಮೂರ್ತಿಯಾಗಿರಬೇಕು
ಕೊಳಕೊಡುವಲ್ಲಿ ಸರ್ವಭೂತರ ಹಿತನಾಗಿರಬೇಕು
ಇಂತೀ ಸಡಗರಿಸಿಕೊಂಡಿಪ್ಪಾತ ನಡಿಗೆರಗುವೆನೆಂದಾತ
ಅಂಬಿಗರ ಚೌಡಯ್ಯ

ಸತ್ಯ ಸ್ವರೂಪವನ್ನರಸುವ ಸಾಧಕನ ದೃಷ್ಟಿ ಅಂತರ್ಮುಖಿಯಾಗಿರಬೇಕು. ಅವನ ಒಳಗಣ್ಣು ತೆರೆದಿರಬೇಕು. ಶರಣರು ದಯಾಸಾಗರದವರಾಗಿರಬೇಕು. ಶ್ರಮ, ದಯೆ, ಅವರ ಬಾಳಿನ ಎರಡು ಕಣ್ಣಾಗಿರಬೇಕು. ಅಂದರೆ 'ಪರೋಪಕಾರಾರ್ಥಂ ಮಿದಂ ಶರೀರಂ' ಎಂಬಂತೆ, ಯಾರಿಗೂ ನೋವನ್ನುಂಟು ಮಾಡದಂತವರಿಗೆ ನಾನು ನಮಿಸುತ್ತೇನೆ ಎನ್ನುತ್ತಾನೆ ಅಂಬಿಗರ ಚೌಡಯ್ಯ.

ಅಂದಿನ ವೀರಶೈವ ಸಮಾಜದ ಲೋಪದೋಷಗಳನ್ನು ನಿರ್ದಾಕ್ಷಿಣ್ಯವಾಗಿ ಎತ್ತಿತೋರಿಸುವ ಅಂಬಿಗರ ಚೌಡಯ್ಯನ ವಚನಗಳು ಏಕದೇವೋಪಾಸಕರಿಗೆ ಹೇಳುವ ಮಾತು ಅವರ ವಚನದಲ್ಲಿ ಈ ರೀತಿ ಮೂಡಿಬಂದಿದೆ.

ಕಟ್ಟಿದ ಲಿಂಗವ ಬಿಟ್ಟು
ಬೆಟ್ಟದ ಲಿಂಗಕ್ಕೆ ಹೋಗಿ
ಅಡಿಮೇಲಾಶಿ ಬೀಳುವವರಿಗೆ
ಮೆಟ್ಟಿದ್ದ ಪಾದರಕ್ಷೆಯತಕ್ಕೊಂಡು
ಲಟಲಟನೆ ಹೊಡೆಯೆಂದ ನಂಬಿಗರಚೌಡಯ್ಯ

ಸದಾಚಾರ ಸನ್ಮಾರ್ಗದಲ್ಲಿ ನಡೆಯುವ ನಿಜಶರಣರನು ತೋರಿಕೆಯ ಡಂಭಾಚಾರದಿಂದ ದೂರವಿರಬೇಕು. ಮಾನವನ ಬದುಕು ಹಲವು ಗೊಂದಲಗಳ ಗೂಡಾಗಬಾರದು ಎಂಬುದು ಈ ಮೇಲಿನ ವಚನದ ತಾತ್ಪರ್ಯ.

ಡಾ. ಎಂ.ಎಸ್. ಆಶಾದೇವಿಯವರು ಅಭಿಪ್ರಾಯಪಡುವಂತೆ, ಧಾರ್ಮಿಕ ಮತ್ತು ಜಾತಿ–ಮತಾಂಧತೆಗಿಂತ ಆರ್ಥಿಕ ಶ್ರೇಣೀಕರಣವು ಮಾನವ ಸಮುದಾಯವನ್ನು ಭೀಕರವಾಗಿ ಒಡೆಯುತ್ತಿವೆ ಎನ್ನುತ್ತಿದ್ದ ದಿನಗಳು ಕಳೆದು ಹೋಗಿ ಆಧುನಿಕತೆಯ ಶಿಖರದ ಈ ಸನ್ನಿವೇಶದಲ್ಲಿ ಮತ್ತೆ ಧರ್ಮಾಧಂತೆಯು ಮಾನವ ಕುಲವನ್ನು ಮತ್ತೆ ಒಂದಾಗದಂತೆ ಒಡೆಯುತ್ತಿರುವ ಭೀಕರ ಸನ್ನಿವೇಶದಲ್ಲಿ ನಾವಿದ್ದೇವೆ ಮತವು ಮನೆಯನ್ನು ಎಂದೂ ಎಷ್ಟು ಭ್ರಷ್ಟಗೊಳಿಸಿರಲಿಲ್ಲ ಹೀಗಾಗಿ ಶ್ರೀ ಸಾಮಾನ್ಯರ ಹೊಣೆಗಾರಿಕೆ ಇಂದು ಎಂದಿಗಿಂತ ನಿರ್ಣಾಯಕವಾದುದಾಗಿದೆ ಪ್ರಭುತ್ವ ಮತ್ತು ಮತಗಳು ಎರಡೂ ಕಳೆದುಕೊಂಡಿರುವ ವಿವೇಕವನ್ನು ಶ್ರೀ

ಸಾಮಾನ್ಯರೇ ಮತ್ತೆ ಮುನ್ನಲೆಗೆ ತರಬೇಕಾಗಿದೆ ಎಂದು ಹೇಳುತ್ತಾರೆ, ಇದಕ್ಕೆಲ್ಲ ಪರಿಹಾರೋಪಾಯಗಳಲ್ಲಿ ನಮ್ಮ ಶರಣರು ಬಾಳಿ ಬದುಕಿದ ಅನುಭವ ಜನ್ಯವೇ ಈ ವಚನಗಳು.

ಚಿಂತೆಗಳೆಂಬ ಸಂತೆಯಲ್ಲಿ ಮನುಷ್ಯ ದಿಕ್ಕು ತಪ್ಪಿ ನಡೆಯುತ್ತಿದ್ದಾನೆ. ಆಸೆ ಆಮಿಷಗಳಿಗೆ ತುತ್ತಾಗಿ ತನ್ನಿರುವನ್ನೆ ಮರೆಯುತ್ತಿದ್ದಾನೆ. ಶಿವನ ಚಿಂತೆಯಲ್ಲಿರುವವರನ್ನು ಕಂಡಿಲ್ಲವೆಂದು ಹೇಳುತ್ತಾನೆ. ಚಿಂತೆಯ ಹಂಗನ್ನು ಬಿಟ್ಟು ಶಿವ ಚಿಂತನೆಯಲ್ಲಿ ನಡೆದರೆ ಮನಶಾಂತಿ–ಭವದ ಬವಣೆಯು ನೀಗಿ ತೇಜೋಮೂರ್ತಿಯಾಗುತ್ತಾನೆ ಎಂದು ಈ ವಚನದ ಮೂಲಕ ಸಾರುತ್ತಾರೆ.

ಬಡತನಕ್ಕೆ ಉಂಬುವ ಚಿಂತೆ
ಉಣಲಾದಡೆಉಡುವಚಿಂತೆ
ಉಡಲಾದಡೆ ಇಡುವ ಚಿಂತೆ
ಇಡಲಾದರೆ ಹೆಂಡಿರ ಚಿಂತೆ
ಹೆಂಡಿರಾದರೆ ಮಕ್ಕಳ ಚಿಂತೆ
ಮಕ್ಕಳಾದರೆ ಬದುಕಿನಚಿಂತೆ
ಬದುಕಾದರೆಕೇಡಿನಚಿಂತೆ
ಕೇಡಾದರೇ ಮರಣದಚಿಂತೆ
ಇಂತೀ ಹಲವು ಚಿಂತೆಯಲ್ಲಿ ಇಪ್ಪವರ ಕಂಡೇನು
ಶಿವನ ಚಿಂತೆಯಲ್ಲಿರುವವರಾರನು ಕಾಣೆನೆಂದಾತ
ನಮ್ಮ ಅಂಬಿಗರ ಚೌಡಯ್ಯ ನಿಜಶರಣ.

ಮಾತು ಗಂಟತನದಿಂದ ಎಷ್ಟು ಮಾತಾಡಿದರೇನು?
ಕಾಮಿನಿಯರ ಕಾಲ ದೆಸೆಯಲ್ಲಿ ಸಿಕ್ಕಿ
ಕ್ರೋಧದ ದಳ್ಳುರಿಯಲ್ಲಿ ಬೆಂದು
ಆಸೆಯೆಂಬ ಪಾಶ ಕೊರಳಲ್ಲಿ ಸುತ್ತಿ
ಅದೇಕೋ ಅದೇತರ ಮಾತೆಂದ ನಂಬಿಗರ ಚೌಡಯ್ಯ

ಮಾತಿನಿಂದ ಮಾವಿನಕಾಯಿ ಉದುರುವುದಿಲ್ಲ. ಬರೀ ಮಾತಿನಿಂದ ದೇವರ ಒಲುಮೆಗೆ ಪಾತ್ರನಾಗುವುದಿಲ್ಲ. ಆಚರಣೆ ಅನುಭವ ಪಡೆಯಬೇಕೆನ್ನುತ್ತಾರೆ. ಮನುಷ್ಯನಾದವನು ಅನಂತ ಕಷ್ಟಕೋಟಲಿಗೆ ಒಳಗಾಗಬೇಕಾಗುತ್ತದೆ. ದೊಡ್ಡ ದೊಡ್ಡ ಮಾತುಗಳನ್ನಾಡಿ ರಮಣೀಯರ ಕಾಲ ಕೆಳಗೆ ಕುಳಿತರೇನು? ಎಂಬ ಪ್ರಶ್ನೆ ಇಟ್ಟ ಅಂಬಿಗರ ಚೌಡಯ್ಯನವರು, ಬಾಯಿ ಬಾಯಿ ಬಡಾಯಿ ಕೊಚ್ಚುವ ಭಂಡರಿಂದ ದೂರವಿರುವುದೇ ಲೇಸೆಂದು ಹೇಳುತ್ತಾರೆ. ಇಂತಹ ವಚನಗಳನ್ನು ಹಿಂಜುತ್ತಾ ಹೋದರೆ ನಿತ್ಯಸತ್ಯ ತತ್ವಗಳ ಒಡಮೂಡುತ್ತವೆ.

ಅವನ ವಚನಗಳಲ್ಲಿ ನಿಜಶರಣನ ಮೊರೆತದ ಜೊತೆಗೆ ಸುಧಾರಕನ ಕಟುಟೀಕೆಯು ಕೇಳಿ ಬರುತ್ತದೆ. ಅವನ ವಚನಗಳು ಅನರ್ಥ ಸಾಧಕವಾದ ಕೋಪದಿಂದ ಹೊಮ್ಮಿದುವಲ್ಲ; ಸದರ್ಥಕ ಸಾಧಕವಾದ ಸತ್ಕೋಪದಿಂದ ಹೊಮ್ಮಿದುವು. ಕನ್ನಡ ಸಾಹಿತ್ಯದಲ್ಲಿ ಈ ಬಗೆಯ ದಿಟ್ಟತನ ವ್ಯಗ್ರತೆಕಂಡು ಬರುವುದು ಬಹುಶಃ ಇಬ್ಬರಲ್ಲೇ ಎಂದು ತೋರುತ್ತದೆ. ಒಬ್ಬ ಸಿಡಿಲು ನುಡಿಯ ಸರ್ವಜ್ಞ; ಇನ್ನೊಬ್ಬ ಕೆಚ್ಚೆದೆಯ ವಚನಕಾರ ಅಂಬಿಗರ ಚೌಡಯ್ಯ (ಜಿ.ಎಸ್.ಎಸ್).

ಇಂತಹ ನಿಜಶರಣ ಅಂಬಿಗರ ಚೌಡಯ್ಯನವರು– ಕಲ್ಯಾಣದ ಕ್ರಾಂತಿ ಆದ ನಂತರ ಶರಣರ ಗಣಗಳೊಡನೆ ಉಳುವಿಗೆ ಹೋಗಿ ಅಲ್ಲಿಯೂ ಅನುಭವ ಮಂಟಪದಲ್ಲಿ ಅನುಷ್ಠಾನ ಗೈಯುತ್ತಾ, ಕೆಲವು ಕಾಲ ಅಲ್ಲಿದ್ದು; ಪುನಃ ತನ್ನೂರು ಚೌಡದಾನಪುರಕ್ಕೆ ಮರಳಿ ಲಿಂಗೈಕ್ಯರಾಗುತ್ತಾರೆ. ಅಲ್ಲಿ ಅಂಬಿಗರ ಚೌಡಯ್ಯನವರ ನಯನ ಮನೋಹರವಾದ ಸುಂದರ ಸ್ಮಾರಕ ರಚನೆಯಾಗಿದೆ. ಪ್ರತಿವರ್ಷ ಸಂಕ್ರಮಣದ ಶುಭದಿನದಂದು ಸಡಗರದಿಂದ ಜಾತ್ರಾ ಮಹೋತ್ಸವ ನಡೆಯುತ್ತದೆ.

**ಕೊನೆ ಟಿಪ್ಪಣಿಗಳು ;**

1) ಕನ್ನಡ ವಿಶ್ವಕೋಶ ಸಂಪುಟ, 1 ಮೈಸೂರು ವಿಶ್ವವಿದ್ಯಾನಿಲಯ
2) ಬಸವ ಪಥ –ಶರಣ ಅಂಬಿಗರ ಚೌಡಯ್ಯ– ಕೆ. ಎಂ.ರೇವಣ್ಣ

**ಆಧಾರ ಗ್ರಂಥಗಳು ;**

1) ಕನ್ನಡ ವಿಶ್ವಕೋಶ –ಸಂಪುಟ 1– ಅಂಬಿಗರ ಚೌಡಯ್ಯ
2) ಬಸವಪಥ ಕನ್ನಡ ಮಾಸಪತ್ರಿಕೆ– ಜೂನ್– 2022, ಸಂಚಿಕೆ–499
3) ಬಂಡಾಯ ವಚನಕಾರ ಅಂಬಿಗರ ಚೌಡಯ್ಯ– ನಾಗಪ್ಪ ಟಿ ಗೋಣಿ.– ಅಭಿಷೇಕ್ ಪ್ರಕಾಶನ– 2013